# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1887\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:25/09/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಜೆ.ಕೆ.ದೇವೇಂದ್ರ, ಯಳಸಿ ಗ್ರಾಮ, ಹಳೇ ಸೊರಬ ಅಂಚೆ, ಸೊರಬ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಹಳೇ ಸೊರಬ ಅಂಚೆ ಯಳಸಿ ಗ್ರಾಮ ನಿವಾಸಿಯಾದ ಶ್ರೀ.ಜೆ.ಕೆ.ದೇವೇಂದ್ರ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ 1) ತಹಶೀಲ್ದಾರ್ ಮತ್ತು 2) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ (ಇನ್ನು ಮುಂದೆ "1 ಮತ್ತು 2ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಯಳಸಿ ಗ್ರಾಮದ ಸರ್ವೆ ನಂ.165ರಲ್ಲಿ 1991-92ನೇ ಸಾಲಿನ ಆಶ್ರಯ ಯೋಜನೆ ಅಡಿ ನಿವೇಶನಗಳು ಮಂಜೂರಾಗಿದ್ದು, ಸದರಿ ನಿವೇಶನಗಳ ಹಕ್ಕು ಪತ್ರಗಳಿಗೆ ಸರಿಯಾದ ನಿವೇಶನ ಸಂಖ್ಯೆ ಮತ್ತು ಚೆಕ್ಕುಬಂಧಿ ನೀಡದೇ ಅಕ್ರಮ ನಡೆದಿದೆ. ಮೂಲ ಫಲಾನುಭವಿಗಳು ನಿವೇಶನ ವಂಚಿತರಾಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಎದುರುದಾರರಿಗೆ ಮನವಿ ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ -

ಸೊರಬ ತಾಲ್ಲೂಕ್ ಯಳಸಿ ಗ್ರಾಮದ ಸರ್ವೆ ನಂ.165ರಲ್ಲಿ 6 ಎಕರೆ 11 ಗುಂಟೆ ಜಮೀನಿದ್ದು, ಸದರಿ ಜಮೀನನ್ನು ಹುಲ್ಲುಬನ್ನಿ ಜಾಡಿ ಎಂದು ವರ್ಗೀಕರಿಸಿ, ಆ ಪೈಕಿ 1 ಎಕರೆ 34 ಗುಂಟೆ

ಜಮೀನಿನಲ್ಲಿ ದೂರುದಾರರ ತಂದೆ ಸೇರಿದಂತೆ ಒಟ್ಟು 37 ಜನರಿಗೆ ಸರ್ಕಾರದಿಂದ ನಿವೇಶನ ಮಂಜೂರು ಮಾಡಿ, ಹಕ್ಕು ಪತ್ರ ವಿತರಿಸಿದ್ದು, ಅವರಲ್ಲಿ ಕೆಲವು ಮಂದಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಮಂಜೂರಾತಿ ಪಟ್ಟಿಯಲ್ಲಿ ಕ್ರಮ ಸಂ.18ರ ಮಂಜೂರಿದಾರರು ದೂರುದಾರರ ತಂದೆಯಾಗಿದ್ದು, 1991ರಲ್ಲಿಯೇ ಹಕ್ಕುಪತ್ರ ವಿತರಣೆ ಮಾಡಿದೆ. ಆದರೆ, ದೂರುದಾರರ ತಂದೆ ಈವರೆವಿಗೂ ಸಹ ನಿವೇಶನದಲ್ಲಿ ಮನೆ ಕಟ್ಟಿಕೊಂಡಿಲ್ಲ. ದೂರುದಾರರು ಅರ್ಜಿ ಸಲ್ಲಿಸಿ, ತಮ್ಮ ತಂದೆಗೆ ಮಂಜೂರಾದ ನಿವೇಶನದ ಹಕ್ಕುಪತ್ರದಲ್ಲಿ ಚೆಕ್ಕುಬಂದಿ ನಮೂದಾಗಿಲ್ಲ. ಚೆಕ್ಕುಬಂದಿ ನಮೂದಿಸಿ ನಕ್ಷೆ ನೀಡುವಂತೆ ಅರ್ಜಿ ಸಲ್ಲಿಸಿದ್ದು, ಅದರಂತೆ ಅಳತೆ ಮಾಡಲಾಗಿ ಸದರಿ ನಿವೇಶನದಲ್ಲಿ ಶ್ರೀಮತಿ.ಕನ್ನಮ್ಮ ಕೋಂ ಕರಿಯಪ್ಪ ರವರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಈ ಬಗ್ಗೆ ನಕ್ಷೆಯನ್ನು ದಿ:03/05/17ರಂದು ದೂರುದಾರರಿಗೆ ನೀಡಲಾಗಿದೆ. ಸದರಿ ನಿವೇಶನದಲ್ಲಿ ದೂರುದಾರರ ತಂದೆ ಮನೆ ಕಟ್ಟದಿದ್ದು, ಶ್ರೀಮತಿ.ಕನ್ನಮ್ಮ ಕೋಂ ಕರಿಯಪ್ಪ ರವರು ಈಗಾಗಲೇ ಮನೆ ಕಟ್ಟಿರುವುದರಿಂದ, ಅದನ್ನು ತೆರವುಗೊಳಿಸುವ ಬಗ್ಗೆ ದೂರುದಾರರು ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿ, ಪರಿಹಾರ ಕಂಡುಕೊಳ್ಳಬಹುದಾಗಿದೆಯೆಂದು ಹೇಳಿದ್ದಾರೆ.

4. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಯಳಸಿ ಗ್ರಾಮದ ಸರ್ವೆ ನಂ.165ರಲ್ಲಿ 1991–92ನೇ ಸಾಲಿನ ಆಶ್ರಯ ಯೋಜನೆ ಅಡಿ ನಿವೇಶನಗಳು ಮಂಜೂರಾಗಿದ್ದು, ಆ ಸಂದರ್ಭದಲ್ಲಿ ಒಟ್ಟು 37 ಜನರಿಗೆ ನಿವೇಶನ ಮಂಜೂರು ಮಾಡಲಾಗಿದೆ. ಕ್ರಮ ಸಂಖ್ಯೆ.18ರಲ್ಲಿ ದೂರುದಾರರ ತಂದೆ ಶ್ರೀ.ಕರಿಯಪ್ಪ ಬಿನ್ ಬಸವಣ್ಣಪ್ಪ ರವರಿಗೆ ನಿವೇಶನ ಮಂಜೂರಾಗಿದ್ದು, ಸದರಿ ನಿವೇಶನದಲ್ಲಿ ಹಕ್ಕು ಪತ್ರದಲ್ಲಿ ಹೇಳಲಾದ ಷರತ್ತಿಗೊಳಪಟ್ಟು ನಿಗಧಿತ ಅವಧಿಯೊಳಗೆ ಮನೆ ನಿರ್ಮಿಸಿಲ್ಲ. ಆದರೆ, ಸದರಿ ನಿವೇಶನದಲ್ಲಿ ಶ್ರೀಮತಿ.ಕನ್ನಮ್ಮ ಕೋಂ ಕರಿಯಪ್ಪ ರವರು ಅಕ್ರಮವಾಗಿ ಮನೆ ನಿರ್ಮಿಸಿರುವುದು ಕಂಡು ಬಂದಿದೆ. ದೂರುದಾರರ ತಂದೆ ಸದರಿ ಸ್ವತ್ತಿನಲ್ಲಿ ಮಂಜೂರಾದ ದಿನದಿಂದ ಮನೆ ಕಟ್ಟಿಕೊಳ್ಳದೇ ಹಕ್ಕು ಪತ್ರದಲ್ಲಿ ನಮೂದಿಸಲಾದ ಷರತ್ತನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅದೇ ರೀತಿ, ಸದರಿ ಸ್ವತ್ತಿನಲ್ಲಿ ಶ್ರೀಮತಿ.ಕನ್ನಮ್ಮ ಕೋಂ ಕರಿಯಪ್ಪ ರವರು ಅಕ್ರಮವಾಗಿ ಮನೆ ನಿರ್ಮಿಸಿರುವುದು ಕಂಡು ಬಂದಿದೆ.

6. ಆದ್ದರಿಂದ, ದೂರುದಾರರ ತಂದೆ ಸದರಿ ಸ್ವತ್ತಿನಲ್ಲಿ ಮಂಜೂರಾದ ದಿನದಿಂದ ಮನೆ ಕಟ್ಟಿಕೊಳ್ಳದೇ ಹಕ್ಕು ಪತ್ರದಲ್ಲಿ ನಮೂದಿಸಲಾದ ಷರತ್ತನ್ನು ಉಲ್ಲಂಘಿಸಿರುವುದರಿಂದ ಹಾಗೂ ಸದರಿ ಸ್ವತ್ತಿನಲ್ಲಿ ಶ್ರೀಮತಿ.ಕನ್ನಮ್ಮ ಕೋಂ ಕರಿಯಪ್ಪ ರವರು ಅಕ್ರಮವಾಗಿ ಮನೆ ನಿರ್ಮಿಸಿರುವುದರಿಂದ, ಸದರಿಯವರನ್ನು ತೆರವುಗೊಳಿಸಿ, ಸದರಿ ನಿವೇಶನವನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/-
(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.